**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**Spl.C.NDPS.9/2020**

| | | |
|---|---|---|
| ಸಾಕ್ಷಿದಾರರ ಹೆಸರು | : | ವಸಂತ ಪಿ.. |
| ತಂದೆಯ ಹೆಸರು | : | ಪರಶುರಾಮಪ್ಪ |
| ವಯಸ್ಸು | : | 54 ವರ್ಷ |
| ಉದ್ಯೋಗ | : | ಕಂದಾಯ ಅಧಿಕಾರಿಗಳು, ನಗರ ಸಭೆ, ರಾಣೇಬೆನ್ನೂರು |
| ವಾಸ ಸ್ಥಳ | : | ರಾಣೇಬೆನ್ನೂರು |

ಪಿ.ಡಬ್ಲ್ಯೂ 2

ಸಿ.ಡಬ್ಲ್ಯೂ 3

ದಿ: 07-05-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ನಾನು ಹರಿಹರ ನಗರ ಸಭೆಯಲ್ಲಿ ಕಂದಾಯ ನಿರೀಕ್ಷಕರಾಗಿ 2020 ರಿಂದ 2022 ರವರೆಗೆ ಕೆಲಸ ಮಾಡಿದ್ದೇನೆ. ದಿಃ 12-09-2020 ರಂದು 12.20 ಗಂಟೆಗೆ ನನ್ನನ್ನು ಪೌರಾಯುಕ್ತರ ಕಛೇರಿಗೆ ಕರೆಸಿ, ಹರಿಹರ ಗ್ರಾಮಾಂತರ ಸಿ.ಪಿ.ಐ. ಕಛೇರಿಗೆ ಹೋಗಲು ಹೇಳಿದರು. ಹರಿಹರ-ಶಿವಮೊಗ್ಗ ರಾಜ್ಯ ಹೆದ್ದಾರಿ ರಸ್ತೆಯಲ್ಲಿ ಭರಣಿ ಹೋಟೆಲ್ ಹತ್ತಿರ ಗಾಂಜಾ ಮಾರಾಟ ಮಾಡುತ್ತಿದ್ದಾರೆ ಅಂತ ಮಾಹಿತಿ ಬಂದಿದೆ, ಆದ್ದರಿಂದ ಸಾಕ್ಷಿಗಾಗಿ ಸಹಕರಿಸುವಂತೆ ಪೌರಾಯುಕ್ತರು ನನಗೆ ಹೇಳಿ ಕಳುಹಿಸಿದರು. ಅದರಂತೆ ನಾನು ಮತ್ತು ಚಾಸಾ-2 ರವರು ಪೊಲೀಸ್ ಠಾಣೆಗೆ 12.30 ಗಂಟೆಗೆ ಹೋದೆವು. ನಾವು ಪೊಲೀಸ್ ಠಾಣೆಗೆ ಹೋದಾಗ ಅಲ್ಲಿ ಚಾಸಾ-1, 4 ಮತ್ತು ಪೊಲೀಸ್ ಸಿಬ್ಬಂದಿಗಳು ಇದ್ದರು. ಅಲ್ಲಿ ಚಾಸಾ-1 ರವರು

ನಮಗೆ ಹರಿಹರ-ಶಿವಮೊಗ್ಗ ರಾಜ್ಯ ಹೆದ್ದಾರಿ ರಸ್ತೆಯಲ್ಲಿ ಭರಣಿ ಹೋಟೆಲ್ ಹತ್ತಿರ ಗಾಂಜಾ ಮಾರಾಟ ಮಾಡುತ್ತಿದ್ದಾರೆ ಸಾಕ್ಷಿಗಾಗಿ ಸಹಕರಿಸಬೇಕು ಅಂತ ಹೇಳಿ ನಮಗೆ ನೋಟಿಸ್ಸು ಕೊಟ್ಟರು. ನಂತರ ನಮ್ಮನ್ನು ಪಂಚರಾಗಿ ಬನ್ನಿ ಅಂತ ನಮಗೆ ನೋಟಿಸ್ಸು ಜಾರಿ ಮಾಡಿದರು. ಆ ನೋಟಿಸ್ಸನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-1 ಅಂತ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಅಂತ ಗುರುತಿಸಲಾಯಿತು.

4. ನಂತರ ಚಾಸಾ-1 ರವರು ನನ್ನನ್ನು, ಚಾಸಾ-3 ರವರನ್ನು, ಚಾಸಾ-4 ಹಾಗೂ ಸಿಬ್ಬಂದಿಗಳನ್ನು ಕರೆದುಕೊಂಡು ಮತ್ತು ಲ್ಯಾಪಟಾಪ್, ಪ್ರಿಂಟರ್, ಅರಗು ಹಾಗೂ ಇತರೆ ಸಾಮಾಗ್ರಿಗಳನ್ನು ತೆಗೆದುಕೊಂಡು ಮಧ್ಯಾಹ್ನ 12.50 ಗಂಟೆಗೆ ಠಾಣೆಯನ್ನು ಬಿಟ್ಟೆವು. 10 ನಿಮಿಷಕ್ಕೆ ಮಾಹಿತಿ ಇದ್ದ ಸ್ಥಳಕ್ಕೆ ತಲುಪಿ, ಸ್ವಲ್ಪ ದೂರದ ಮರೆಯಲ್ಲಿ ಗಾಡಿಯನ್ನು ನಿಲ್ಲಿಸಿ ವೀಕ್ಷಿಸಿದರು. ಆಗ ಭರಣಿ ಹೋಟೆಲ್ ಮುಂಭಾಗದಲ್ಲಿ ಕೆ.ಎ.14 ಬಿ.8176 ಕಪ್ಪು ಮತ್ತು ಹಳದಿ ಬಣ್ಣದ ಆಟೋದಲ್ಲಿ 03 ಜನರು ಇದ್ದರು, ಅವರ ಪೈಕಿ ಮಲ್ಲಿಕಾರ್ಜುನ ಎಂಬುವವರ ಬಳಿ ನೀಲಿ ಬಣ್ಣದ ಬ್ಯಾಗ್ ಇತ್ತು, ರಾಹುಲ್ ಎಂಬುವವರ ಬಳಿ ಕೆಂಪು ಬಣ್ಣದ ಬ್ಯಾಗ್ ಇತ್ತು. ಅವರು ಏನೋ ಒಂದು ಮಾರಾಟ ಮಾಡುತ್ತಿರುವುದು ಕಂಡು ಬಂದಿತು, ಆದ್ದರಿಂದ ಪೊಲೀಸರು ಅವರನ್ನು ಸುತ್ತುವರೆದು ಹಿಡಿದರು. ಅವರನ್ನು ಚೆಕ್ ಮಾಡಲು ಅವರಿಗೆ ನೋಟಿಸ್ಸು ಕೊಟ್ಟರು. ಚಾಸಾ-1 ರವರು ಅವರ ಹೆಸರು ಮತ್ತು ವಿಳಾಸವನ್ನು ವಿಚಾರಿಸಿದರು. ಆಗ ತಮ್ಮ ಹೆಸರನ್ನು ರಾಹುಲ್, ಮಲ್ಲಿಕಾರ್ಜುನ ಮತ್ತು ಪ್ರಮೋದ ಅಂತ ಹೇಳಿದರು. ರಾಹುಲ್ ಎಂಬುವವರ ಬಳಿ ಇದ್ದ ಕೆಂಪು ಬಣ್ಣದ ಬ್ಯಾಗ್ ನ್ನು ಪರಿಶೀಲನೆ ಮಾಡಿದಾಗ ಅದರಲ್ಲಿ ಸೊಪ್ಪು ಮತ್ತು ಮೊಗ್ಗಿನಂತಹ ವಸ್ತು ಕಂಡು ಬಂತು. ಅದರ ವಾಸನೆ ಗಾಂಜಾದ ವಾಸನೆ ಬರುತ್ತಿತ್ತು. ಆದ್ದರಿಂದ ಅದು ಗಾಂಜಾ ಅಂತ ಗೊತ್ತಾಯಿತು. ನಂತರ ಮಲ್ಲಿಕಾರ್ಜುನರವರ ನೀಲಿ ಬಣ್ಣದ ಬ್ಯಾಗ್ ನ್ನು ಪರಿಶೀಲನೆ ಮಾಡಿದಾಗ, ಅವರ

ಬಳಿ ಸಹ ಅದೇ ತರಹ ಗಾಂಜಾ ವಾಸನೆ ಬರುವ ವಸ್ತು ಇತ್ತು. ತಲಾ 02 ಬ್ಯಾಗ್ ಗಳಿದ್ದ ವಸ್ತುಗಳನ್ನು ತೂಕ ಮಾಡಿ ನೋಡಿದಾಗ ಅದು ತಲಾ 2.45 ಗ್ರಾಂ. ತೂಕ ಇದ್ದವು. ಪ್ರಮೋದರವರ ಅಂಗ ಶೋಧನೆ ಮಾಡಿದಾಗ ಅವರ ಪ್ಯಾಂಟಿನ ಬಲ ಜೇಬಿನಲ್ಲಿ 11 ಸಣ್ಣ ಪ್ಲಾಸ್ಟಿಕ್ ಕವರ್ ಗಳು ಇದ್ದವು, ಅದರಲ್ಲಿ ಗಾಂಜಾ ಸೊಪ್ಪು ಇತ್ತು, ಅದನ್ನು ತೂಕ ಮಾಡಿ ನೋಡಿದಾಗ 80 ಗ್ರಾಂ. ಗಾಂಜಾ ಇತ್ತು ಮತ್ತು ಅವರ ಪ್ಯಾಂಟ್ ನ ಎಡ ಜೇಬಿನಲ್ಲಿ 23 ಸಣ್ಣ ಪಾಲಿಥಿನ್ ಕವರ್ ಗಳು ಇದ್ದವು. ನಂತರ ಅವುಗಳನ್ನು ಒಂದು ಬ್ಯಾಗ್ ನಲ್ಲಿ ಹಾಕಿ ಸೀಲ್ ಮಾಡಲಾಯಿತು. ನಂತರ ಆರೋಪಿತರು ತಂದಿದ್ದ ಆಟೋವನ್ನು ಸಹ ಜಪ್ತು ಮಾಡಿ, ಪಂಚನಾಮೆ ಮಧ್ಯಾಹ್ನ 1.30 ರಿಂದ 3.15 ರವರೆಗೆ ಮಾಡಿದರು. ಆ ಪಂಚನಾಮೆಗೆ ನಾನು ಸಹಿ ಮಾಡಿದ್ದೇನೆ. ಪಂಚನಾಮೆಯನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-2 ಅಂತ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಅಂತ ಗುರುತಿಸಲಾಯಿತು.

2. ಆ ಸಮಯದಲ್ಲಿ ನನ್ನೊಂದಿಗೆ ಚಾಸಾ-2 ರವರು ಸಹ ಹಾಜರಿದ್ದರು. ಆಯುಕ್ತರು ನನಗೆ ಪಂಚನಾಮೆಗೆ ಹೋಗಿ ಸಹಕರಿಸಿ ಅಂತ ಹೇಳಿದ್ದರು. ಅದರಂತೆ ನಾವು ದಿಃ 12-09-2020 ರಂದು ನಾನು ಮತ್ತು ಚಾಸಾ-2 ರವರು ಸಿ.ಪಿ.ಐ., ಹರಿಹರ ಗ್ರಾಮಾಂತರ ವೃತ್ತ ನಿರೀಕ್ಷಕರ ಕಛೇರಿಗೆ ಹೋಗಿದ್ದು, ಆಗ ಮಧ್ಯಾಹ್ನ 12.30 ಗಂಟೆ ಆಗಿತ್ತು. ಆ ವೇಳೆಗೆ ಚಾಸಾ-4 ರವರು ಬಂದಿದ್ದರು. ನಾವು ಎಲ್ಲರೂ ಪರಸ್ಪರ ಪರಿಚಯ ಮಾಡಿಕೊಂಡೆವು. ಹರಿಹರ-ಶಿವಮೊಗ್ಗ ರಸ್ತೆಯಲ್ಲಿರುವ ಭರಣಿ ಹೋಟೆಲ್ ಮುಂಭಾಗದಲ್ಲಿ ಯಾರೋ ಒಬ್ಬರು ಗಾಂಜಾವನ್ನು ಅಕ್ರಮವಾಗಿ ಮಾರಾಟ ಮಾಡುತ್ತಿರುವುದಾಗಿ ಮಾಹಿತಿ ಬಂದಿದ್ದು, ದಾಳಿ ಮಾಡಲು ಪಂಚರಾಗಿ ಸಹಕರಿಸಲು ನೋಟಿಸ್ಸು ಜಾರಿ ಮಾಡಿದರು. ಆ ಸಮಯದಲ್ಲಿ ಪತ್ರಾಂಕಿತ ಅಧಿಕಾರಿಗಳಾಗಿ ಚಾಸಾ-4 ರವರನ್ನು ನೇಮಕ ಮಾಡಿದರು.

3. ನಾನು ಪೊಲೀಸ್ ಸಿಬ್ಬಂದಿ ಎಲ್ಲರೂ ಎರಡು ಇಲಾಖಾ ವಾಹನಗಳಲ್ಲಿ ಅಗತ್ಯ ಸಾಮಾಗ್ರಿಗಳನ್ನು ತೆಗೆದುಕೊಂಡು ಸದರಿ ಹರಿಹರ-ಶಿವಮೊಗ್ಗ ರಸ್ತೆಯಲ್ಲಿರುವ ಇಂಡಿಯನ್ ಡಾಬಾದ ಹತ್ತಿರ ಗಾಡಿಯನ್ನು ನಿಲ್ಲಿಸಿದರು. ನಾವೆಲ್ಲರೂ ಪರಸ್ಪರ ಅಂಗ ಶೋಧನೆ ಮಾಡಿಕೊಂಡು ನಮ್ಮ ಬಳಿ ಯಾವುದೇ ಗಾಂಜಾ ವಸ್ತು ಇಲ್ಲ ಅಂತ ಖಚಿತಪಡಿಸಿಕೊಂಡೆವು. ಆಗ ಆಟೋದಲ್ಲಿ 03 ಜನ ಬಂದರು. ಅವರನ್ನು ಸುತ್ತುವರೆದ ಅವರ ಬಳಿ ಇರುವ ಕಾಲೇಜು ಬ್ಯಾಗ್ ನ್ನು ಪೊಲೀಸರು ಪರಿಶೀಲನೆ ಮಾಡಿದರು. ಆ ಮೂವರ ವ್ಯಕ್ತಿಗಳ ಹೆಸರು ರಾಹುಲ್, ಮಲ್ಲಿಕಾರ್ಜುನ ಮತ್ತು ಪ್ರಮೋದ ಅಂತ ತಿಳಿಸಿದರು. ಅವರನ್ನು ವಿಚಾರಿಸಿದಾಗ ಗಾಂಜಾ ಮಾರಾಟ ಮಾಡುತ್ತಿರುವುದಾಗಿ ತಿಳಿಸಿದರು. ಪತ್ರಾಂಕಿತ ಅಧಿಕಾರಿಗಳಾದ ಚಾಸಾ-4 ರವರು ಅಂಗ ಶೋಧನೆ ಮಾಡಲು ಕೇಳಿದರು, ಅದಕ್ಕೆ ಆರೋಪಿತರು ಒಪ್ಪಿಕೊಂಡಿರುತ್ತಾರೆ. ಆರೋಪಿ ರಾಹುಲ್ ಬಳಿ Fast track ಎಂಬ ಹೆಸರಿನ ಕೆಂಪು ಬಣ್ಣದ ಕಾಲೇಜ್ ಬ್ಯಾಗ್ ನ್ನು ನೋಡಿದಾಗ ಅದರಲ್ಲಿ ಸೊಪ್ಪಿನ ತರ ವಸ್ತು ಇದ್ದು, ಪೊಲೀಸರು ಅದನ್ನು ಗ್ರಹಿಸಿದಾಗ ಅದು ಗಾಟು ವಾಸನೆ ಬಂತು. ಅದು ಮೊಗ್ಗು, ಸೊಪ್ಪಿನಿಂದ ಕೂಡಿತ್ತು. ಆದ್ದರಿಂದ ಅದು ಗಾಂಜಾ ಅಂತ ಖಚಿತಪಡಿಸಿಕೊಂಡರು. ನಂತರ ಅದನ್ನು ತೂಕ ಮಾಡಿ ನೋಡಿದಾಗ 2 ಕೆ.ಜಿ. 45 ಗ್ರಾಂ. ಇದ್ದು, ಅದನ್ನು ಬಟ್ಟೆಯ ಚೀಲದಲ್ಲಿ ಹಾಕಿ ಸೀಲ್ ಮಾಡಿದರು.

4. 2 ನೇ ಆರೋಪಿಯ ಬಳಿ ಬೂದು ಬಣ್ಣದ ನೀಲಿ ಪಟ್ಟಿ ಇರುವ ಬ್ಯಾಗ್ ಇತ್ತು. ಅದರಲ್ಲಿ ಖಾಕಿ ಬಣ್ಣದ ಟೇಪ್ ನಿಂದ ಸುತ್ತಲ್ಪಟ್ಟಿತ್ತು. ಅದನ್ನು ತೆರೆದು ನೋಡಲಾಗಿ ಅದು ಸೊಪ್ಪಿನ ತರ ವಸ್ತು ಇದ್ದು, ಗಾಟು ವಾಸನೆ ಬರುತ್ತಿತ್ತು ಮತ್ತು ಮೊಗ್ಗು ಸೊಪ್ಪಿನಿಂದ ಕೂಡಿತ್ತು. ಅದು ಗಾಂಜಾ ಅಂತ ಖಚಿತಪಡಿಸಿಕೊಂಡರು. ನಂತರ ನಂತರ ಅದನ್ನು ತೂಕ ಮಾಡಿ ನೋಡಿದಾಗ 2 ಕೆ.ಜಿ. 45 ಗ್ರಾಂ. ಇದ್ದು, ಅದನ್ನು ಬಟ್ಟೆಯ ಚೀಲದಲ್ಲಿ ಹಾಕಿ ಸೀಲ್ ಮಾಡಿದರು.

5. ನಂತರ 3 ನೇ ಆರೋಪಿತನ ಅಂಗ ಶೋಧನೆ ಮಾಡಿದಾಗ 11 ಪ್ಲಾಸ್ಟಿಕ್ ಕವರ್ ನಲ್ಲಿ ಹೂವು, ಮೊಗ್ಗು ಮತ್ತು ಸೊಪ್ಪಿನಿಂದ ಕೂಡಿದ ವಸ್ತು ಇತ್ತು. ಅದು ಗಾಟು ವಾಸನೆ ಬರುತ್ತಿತ್ತು. ಅದು ಗಾಂಜಾ ಅಂತ ಖಚಿತಪಡಿಸಿಕೊಂಡರು. ನಂತರ ನಂತರ ಅದನ್ನು ತೂಕ ಮಾಡಿ ನೋಡಿದಾಗ 2 ಕೆ.ಜಿ. 80 ಗ್ರಾಂ. ಇದ್ದು, ಅದನ್ನು ಬಟ್ಟೆಯ ಚೀಲದಲ್ಲಿ ಹಾಕಿ ಸೀಲ್ ಮಾಡಿದರು. 3 ನೇ ಆರೋಪಿಯ ಎಡಗಡೆ ಜೇಬಿನಲ್ಲಿ 23 ಖಾಲಿ ಪ್ಲಾಸ್ಟಿಕ್ ಕವರ್ ಗಳು ಇದ್ದವು. ನಂತರ ಅವುಗಳನ್ನು ವಶಪಡಿಸಿಕೊಂಡರು. ಅಮಾನತ್ತುಪಡಿಸಿಕೊಂಡಿರುವಂತ ಮದ್ದೆ ಮಾಲುಗಳ ಮೇಲೆ ಚಾಸಾ-4 ರವರು ಸಹಿ ಮಾಡಿದರು. ಆ ಆಟೋದ ನಂಬರ ಕೆ.ಎ. 14 ಬಿ. 8176 ಇರುತ್ತದೆ. ಸದರಿ ಆಟೋವನ್ನು ಸಹ ಪೊಲೀಸರು ವಶಕ್ಕೆ ಪಡೆದುಕೊಂಡರು. ಸ್ಥಳದಲ್ಲಿ ಪೊಲೀಸರು ಪಂಚನಾಮೆ ಮಾಡಿ ನನ್ನ ಸಹಿ ಪಡೆದರು. ಆ ಪಂಚನಾಮೆಯನ್ನು ಈಗ ನೋಡಿ ಅದರಲ್ಲಿ ನನ್ನ ಸಹಿ ಗುರುತಿಸುತ್ತೇನೆ. ಪಂಚನಾಮೆಯನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-2 ಅಂತ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಅಂತ ಗುರುತಿಸಲಾಯಿತು. ಅಮಾನತ್ತು ಪಂಚನಾಮೆಯ ಕಾಲಕ್ಕೆ ತೆಗೆದಿರುವ ನಿಪಿ-3 ರಿಂದ 12 ರ ಪೋಟೋಗಳನ್ನು ಈಗ ನೋಡಿ ಗುರುತಿಸುತ್ತೇನೆ. ಅಮಾನತ್ತು ಮಾಡಿಕೊಂಡಿರುವಂತಹ ಮುದ್ದೆ ಮಾಲುಗಳನ್ನು ಈಗ ನ್ಯಾಯಾಲಯದಲ್ಲಿ ನೋಡಿ ಗುರುತಿಸುತ್ತೇನೆ. Fast Track ಅಂತ ಹೆಸರಿನ ಕೆಂಪು ಬಣ್ಣದ ಕಾಲೇಜಿನ ಬ್ಯಾಗ್, ENO ಅಂತ ಹೆಸರಿನ ಬೂದು ಬಣ್ಣದ ನೀಲಿ ಪಟ್ಟಿ ಇರುವ ಕಾಲೇಜು ಬ್ಯಾಗ್, ಖಾಲಿ ಪ್ಲಾಸ್ಟಿಕ್ ಕವರ್, 23 ಖಾಲಿ ಪಾಲಿಥಿನ್ ಕವರ್ ಗಳನ್ನು ಒಟ್ಟಿಗೆ, 03 ಮಾದರಿ ಗಾಂಜಾದ ಪ್ಯಾಕೆಟ್ ನ್ನು ನೋಡಿ ಗುರುತಿಸುತ್ತೇನೆ. ಅವುಗಳನ್ನು ಕ್ರಮವಾಗಿ ಮು.ಮಾ.1 ರಿಂದ 7 ಅಂತ ಗುರುತಿಸಲಾಗಿದೆ. ಅವುಗಳನ್ನು ಈಗ ನೋಡಿ ಗುರುತಿಸುತ್ತೇನೆ. ಆರೋಪಿತರನ್ನು ನಾನು ನೋಡಿದರೆ ಗುರುತಿಸುತ್ತೇನೆ.

ವಿಸಿಯ ಮೂಲಕ ಆರೋಪಿತರನ್ನು ನೋಡಿ ಗುರುತಿಸುತ್ತೇನೆ ಮತ್ತು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸುತ್ತೇನೆ.

**ಪಾಟೀ ಸವಾಲುಃ ಶ್ರೀ ಕೆ.ಕೆ.(ಎಲ್.ಎ.ಡಿ.ಸಿ.), ವಕೀಲರಿಂದ 3 ನೇ ಆರೋಪಿತರ ಪರವಾಗಿ:**

6. ನಮ್ಮ ಮನೆಯಿಂದ ಗ್ರಾಮಾಂತರ ಪೊಲೀಸ್ ಠಾಣೆಯು 06 ಕಿ.ಮೀ. ಅಂತರ ಇದೆ ಅಂದರೆ ಸರಿಯಲ್ಲ 02-03 ಕಿ.ಮೀ ಅಂತರ ಇರುತ್ತದೆ. ನಮ್ಮ ಮನೆಯಿಂದ ನಮ್ಮ ಕಛೇರಿ 03 ಕಿ.ಮೀ. ಅಂತರ ಇರುತ್ತದೆ. ಗ್ರಾಮಾಂತರ ಪೊಲೀಸ್ ಠಾಣೆಯು ನಮ್ಮ ಕಛೇರಿಯಿಂದ ಗುತ್ತೂರು ಹತ್ತಿರ ಬರುತ್ತದೆ ಅಂದರೆ ನಿಜ. ನಮ್ಮ ಕಛೇರಿಯಿಂದ ಗ್ರಾಮಾಂತರ ಪೊಲೀಸ್ ಠಾಣೆಯು 03 ಕಿ.ಮೀ. ಅಂತರ ಇರುತ್ತದೆ. ಸದರಿ ರಸ್ತೆಯಲ್ಲಿ ಸಾಕಷ್ಟು ಸರ್ಕಾರಿ ಕಛೇರಿಗಳು ಇರುತ್ತವೆ ಅಂದರೆ ನಿಜ. ನಾನು ಎಲ್ಲಾ ಪ್ರಕರಣದಲ್ಲಿ ಪಂಚರಾಗಿದ್ದೇನೆ ಅಂದರೆ ನಿಜ. ಹರಿಹರದ ಬೈ ಪಾಸ್ ರಸ್ತೆಯಲ್ಲಿ ವೈನ್ ಶಾಪ್, ಅಂಗಡಿಗಳು ಮತ್ತು ಪೆಟ್ರೋಲ್ ಬಂಕ್ ಇವೆ ಅಂದರೆ ಪೆಟ್ರೋಲ್ ಬಂಕ್ ಇಲ್ಲ, ಡಾಬಾ ಇವೆ. ಅಲ್ಲಿ  ಪೆಟ್ರೋಲ್ ಬಂಕ್ ಇಲ್ಲ ಅಂತ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಬೈ ಪಾಸ್ ರಸ್ತೆಯ ಎಡಗಡೆಯಲ್ಲಿ ಪೆಟ್ರೋಲ್ ಬಂಕ್ ಇದೆ. ಅನಗವಾಡಿ ಕ್ರಾಸ್ ನಲ್ಲಿ ಮತ್ತೊಂದು ಪೆಟ್ರೋಲ್ ಬಂಕ್ ಇದೆ ಅಂದರೆ ನನಗೆ ಗೊತ್ತಿಲ್ಲ. ಆ ಅಂಗಡಿಗಳಲ್ಲಿ ಸಿಸಿಟಿವಿ ಇದೆ ಅಂದರೆ ನಿಜ. ಆ ಬೈ ಪಾಸ್ ರಸ್ತೆಯಲ್ಲಿ ವೀಳದ್ಯೆಲೆ ಮಾರ್ಕೆಟ್ ಇದೆ ಅಂದರೆ ನಿಜ. ಅದು ಜನನಿಬಿಡ ಪ್ರದೇಶ ಅಂದರೆ ನಿಜ.

7. ನಿಪಿ-1 ನ್ನು ನನಗೆ ಪ್ರತ್ಯೇಕವಾಗಿ ನೀಡಿರುವುದಿಲ್ಲ. ನನಗೆ ನಿಪಿ-1 ನ್ನು ಎಷ್ಟು ಗಂಟೆಗೆ ಜಾರಿ ಮಾಡಿದರು ಅಂದರೆ ಮಧ್ಯಾಹ್ನ 12.30 ಗಂಟೆಗೆ ಮಾಡಿದರು. ಆ ಸಮಯದಲ್ಲಿ ನಿಪಿ-1 ರಲ್ಲಿ ಬರೆದಿಲ್ಲ ಅಂದರೆ ನಿಜ. ಆ ಬೈ ಪಾಸ್ ನಲ್ಲಿ ಗಸ್ತು ವಾಹನ ಯಾವಾಗಲೂ ಓಡಾಡುತ್ತಿರುತ್ತದೆ ಅಂದರೆ ನಿಜ. ನಿಪಿ-3 ರಲ್ಲಿ ಯಾರೂ ID Card ಧರಿಸಿಲ್ಲ ಅಂದರೆ ನಿಜ. ನನ್ನ ಸಮಕ್ಷಮ Search list ಮಾಡಿಲ್ಲ ಸಹಿ

ಪಡೆದುಕೊಂಡಿಲ್ಲ. Memo of Arrest ಗೆ ನನ್ನ ಸಹಿ ಪಡೆದುಕೊಂಡಿಲ್ಲ. Chain of custody ಮಾಡಿಲ್ಲ. ಸ್ಥಳದಲ್ಲಿ ನಕಾಶೆಯನ್ನು ತಯಾರಿಸಿಲ್ಲ. ಸ್ಥಳದಲ್ಲಿ ವಿಡಿಯೋಗ್ರಾಫಿ ಮಾಡಿಲ್ಲ. ಆರೋಪಿತರಿಂದ ಯಾವುದೇ ವಸ್ತುವನ್ನು ವಶಪಡಿಸಿಕೊಂಡಿಲ್ಲ, ನಾನು ಪೊಲೀಸ್ ಠಾಣೆಗೆ ಹೋಗಿ ಸಹಿ ಮಾಡಿದ್ದೇನೆ ಅಂದರೆ ಸರಿಯಲ್ಲ. ನಿಪಿ-8 ರಲ್ಲಿ Face mask ಹಾಕಿರುವುದರಿಂದ ಅವರು ಯಾರು ಅಂತ ಗೊತ್ತಾಗುವುದಿಲ್ಲ ಅಂದರೆ ನನಗೆ ಗೊತ್ತಾಗುತ್ತದೆ. ನಿಪಿ-9 ರಲ್ಲಿ Face mask ಹಾಕಿರುವುದರಿಂದ ಅವರು ಯಾರು ಅಂತ ಗೊತ್ತಾಗುವುದಿಲ್ಲ ಮತ್ತು ಆರೋಪಿತರು ಕಾಣುವುದಿಲ್ಲ ಅಂದರೆ ಒಬ್ಬ ಆರೋಪಿ ಕಾಣುತ್ತಾರೆ. ಆರೋಪಿತರು ಕಾಣುವುದಿಲ್ಲ ಆದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಿಪಿ-10 ರಲ್ಲಿ ಆರೋಪಿತರು ಕಾಣುವುದಿಲ್ಲ ಮತ್ತು ಯಾರೂ ಕಾಣುವುದಿಲ್ಲ ಮತ್ತು ವಸ್ತುಗಳ ಸಹ ಕಾಣುವುದಿಲ್ಲ ಅಂದರೆ ಅವುಗಳನ್ನು ಬಟ್ಟೆಯಲ್ಲಿ ಕಟ್ಟಿದ್ದಾರೆ.

8. ಹರಿಹರದಲ್ಲಿ ಆರೋಗ್ಯ ಮಾತೆ ಚರ್ಚೆ ಇದೆ ಅಂದರೆ ನಿಜ. ಅಲ್ಲಿ ವರ್ಷದಲ್ಲಿ ವಾರಗಂಟಲೆ ಜಾತ್ರೆ ಆಗುತ್ತದೆ ಅಂದರೆ ನಿಜ. 3 ನೇ ಆರೋಪಿಯು ಆ ದಿನ ಚರ್ಚೆಗೆ ಬಂದವರನ್ನು ಪೊಲೀಸರು ಅವರನ್ನು ಕರೆದುಕೊಂಡು ಹೋಗಿ ಸುಳ್ಳು ಕೇಸ್ ದಾಖಲಿಸಿ, ಪೊಲೀಸರು ಹೇಳಿದ ಹಾಗೆ ನಾನು ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಅಂದರೆ ಸರಿಯಲ್ಲ. ಡಾಬಾದ ಖಾನೆಶುಮಾರಿ ನಂಬರ ನನಗೆ ಗೊತ್ತಿಲ್ಲ ಹಾಗೂ ಅದು ಯಾವ ಸರ್ವೆ ನಂಬರನಲ್ಲಿದೆ ಅಂತ ನನಗೆ ಗೊತ್ತಿಲ್ಲ. ನಿಪಿ-3 ರ ಪೋಟೋದಲ್ಲಿ ಅದೇ ಭರಣಿ ಹೋಟೆಲ್ ಅಂತ ತೋರಿಸಲು ಯಾವುದೇ ಗುರುತು ಇಲ್ಲ ಅಂದರೆ ನಿಜ. ನಾನು ಹೇಳಿದ ರೀತಿಯಲ್ಲಿ ಯಾವುದೇ ಭರಣಿ ಹೋಟೆಲ್ ಇಲ್ಲ ಅಂದರೆ ಸುಳ್ಳು. ಆ ಪೋಟೋದಲ್ಲಿ ಇಂಡಿಯನ್ ಡಾಬಾ ಕಾಣುತ್ತಿಲ್ಲ ಅಂದರೆ ಉತ್ತರ ದಿಕ್ಕಿನಲ್ಲಿದೆ. ನಿಪಿ-3 ರಲ್ಲಿ ಪಪ್ಪಾಯ ತೋಟ ಕಾಣುತ್ತಿಲ್ಲ. ಸಾಕ್ಷಿದಾರರು ಹೇಳುತ್ತಾರೆ ಭರಣಿ ಹೋಟೆಲ್ ನ ಹಿಂಬದಿಯಲ್ಲಿದೆ. ನಾನು ಹೇಳಿದ ರೀತಿಯಲ್ಲಿ ಯಾವುದೇ ಪಪ್ಪಾಯ

ತೋಟ ಇಲ್ಲ ಅಂದರೆ ಸುಳ್ಳು. ಮುದ್ದೆ ಮಾಲುಗಳನ್ನು ಆರೋಪಿತರಿಂದ ವಶಪಡಿಸಿಕೊಂಡಿದ್ದು ಸುಳ್ಳು ಅಂದರೆ ಸರಿಯಲ್ಲ. ಮು.ಮಾ.1 ರಿಂದ 7 ಯಾವುದು ಗಾಂಜಾ ಅಲ್ಲ ಅಂದರೆ ಸುಳ್ಳು.

**ಪಾಟೀ ಸವಾಲುಃ 1 ಮತ್ತು 2 ನೇ ಆರೋಪಿತರ ಪರವಾಗಿ**:

3 ನೇ ಆರೋಪಿತರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.